ಕರ್ನಾಟಕ ಸರ್ಕಾರ
ಆಯುಕ್ತಾಲಯ
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯಸೌಧ, ಮಾಗಡಿ ರಸ್ತೆ, ಬೆಂಗಳೂರು–23.**

ಸಂಖ್ಯೆ: ಎಫ್‌ಡಬ್ಲ್ಯೂ/ಬಿಜಿಟಿ/07/2025–26 ದಿನಾಂಕ: 29/05/2025
ಇ–1774844

**<u>ಸುತ್ತೋಲೆ</u>**

**ವಿಷಯ:** 2025–26 ನೇ ಸಾಲಿಗೆ ಗುತ್ತಿಗೆ/ಹೊರಗುತ್ತಿಗೆಯ ನೌಕರ/ಸಿಬ್ಬಂದಿ ಹುದ್ದೆಗಳ ಜಿಲ್ಲಾವಾರು ಮಾಹಿತಿ/ದಾಖಲಾತಿಗಳ ಪರಿಶೀಲನೆಗೆ ಹಾಜರಾಗುವ ಬಗ್ಗೆ.

**ಉಲ್ಲೇಖ:** ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು, ಇವರ ವಿಡಿಯೋ ಸಂವಾದದ ದಿನಾಂಕ: 17–05–2025 ರಲ್ಲಿ ಚರ್ಚಿಸಿದನ್ವಯ.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಅಧೀನ ಕಛೇರಿ/ಪ್ರಾ.ಆ.ಕೇ/ಸ.ಆ.ಕೇ.ಗಳಲ್ಲಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳ ಸೇವೆಗಳನ್ನು ಇಲಾಖೆಯು ಪಡೆಯುತ್ತಿದ್ದು, ಸದರಿ ಸಿಬ್ಬಂದಿಗಳಿಗೆ ಪ್ರತಿ ಮಾಹೆಯಾನ ವೇತನ ಪಾವತಿಸಲು ಸಮರ್ಪಕವಾದ ಮಾಹಿತಿ/ದಾಖಲಾತಿಗಳು ಲಭ್ಯವಿಲ್ಲದ ಕಾರಣ, ವೇತನವನ್ನು ಪಾವತಿಸಲು ವಿಳಂಬವಾಗುತ್ತಿದ್ದು, ಅನುದಾನದ ಕೊರತೆಯುಂಟಾಗುತ್ತಿದೆ.

ಆದುದರಿಂದ, 2025–26 ನೇ ಸಾಲಿಗೆ ಅಗತ್ಯವಿರುವ ಅನುದಾನವನ್ನು ಪಡೆಯಲು ಹಾಗೂ ವಿಳಂಬವನ್ನು ತಡೆಯಲು, ಗುತ್ತಿಗೆ/ಹೊರಗುತ್ತಿಗೆ ನೌಕರ/ಸಿಬ್ಬಂದಿಗಳ ಸ್ಪಷ್ಟವಾದ ಮಾಹಿತಿಯನ್ನು ಅಗತ್ಯ ದಾಖಲತಿಗಳೊಂದಿಗೆ ಆಯಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಿಂದ ಈ ಕೆಳಕಂಡಂತೆ ನಿಗದಿಪಡಿಸಿರುವ ದಿನಾಂಕದಂದು ಸಂಬಂಧಪಟ್ಟ ಕಛೇರಿ ಅಧೀಕ್ಷಕರು ಹಾಗೂ ವಿಷಯ ನಿರ್ವಾಹಕರು ಅಯುಕ್ತಾಲಯದಲ್ಲಿ ಖುದ್ದು ಹಾಜರಿದ್ದು, ರಾಜ್ಯವಲಯ, ಜಿಲ್ಲಾ ಪಂಚಾಯತ್ (ಕೇಂದ್ರ ಪುರಸ್ಕೃತ ಯೋಜನೆ ಒಳಗೊಂಡಂತೆ) ತಾಲ್ಲೂಕು ಪಂಚಾಯತ್‌ನ ಲೆಕ್ಕ ಶೀರ್ಷಿಕೆವಾರು, ಕಛೇರಿ/ಸಂಸ್ಥೆ/ಆಸ್ಪತ್ರೆ/ಪ್ರಾಥಮಿಕ ಆರೋಗ್ಯ ಕೇಂದ್ರಗಳ ಜಿಲ್ಲಾವಾರು ಸಂಪೂರ್ಣ ಮಾಹಿತಿ/ದಾಖಲಾತಿ ಹಾಗೂ ಸಂಬಂಧಪಟ್ಟ ಸರ್ಕಾರದ ಆದೇಶಗಳ ಪ್ರತಿಗಳನ್ನು ಒದಗಿಸಲು ಸೂಚಿಸಿದೆ.

**ಬೆಂಗಳೂರು ವಿಭಾಗ:–** ದಿನಾಂಕ: 02/06/2025 ರಿಂದ 03/06/2025

1. ಬೆಂಗಳೂರು ನಗರ.
2. ಬೆಂಗಳೂರು (ಗ್ರಾ)
3. ಚಿಕ್ಕಬಳ್ಳಾಪುರ.
4. ಚಿತ್ರದುರ್ಗ.
5. ದಾವಣಗೆರೆ.
6. ಕೋಲಾರ.
7. ರಾಮನಗರ.
8. ತುಮಕೂರು.

**ಮೈಸೂರು ವಿಭಾಗ:–** ದಿನಾಂಕ: 05/06/2025 ರಿಂದ 06/06/2025

1. ಚಿಕ್ಕಮಗಳೂರು.
2. ದಕ್ಷಿಣ ಕನ್ನಡ.
3. ಹಾಸನ.
4. ಕೊಡಗು.
5. ಮಂಡ್ಯ.
6. ಮೈಸೂರು.
7. ಉಡುಪಿ

**ಕಲಬುರಗಿ ವಿಭಾಗ:–** ದಿನಾಂಕ: 09/06/2025 ರಿಂದ 10/06/2025

1. ಬಳ್ಳಾರಿ.
2. ಬೀದರ್.
3. ಕಲಬುರಗಿ.
4. ಕೊಪ್ಪಳ.
5. ರಾಯಚೂರು.
6. ವಿಜಯನಗರ.
7. ಯಾದಗಿರಿ.

**ಬೆಳಗಾವಿ ವಿಭಾಗ:–** ದಿನಾಂಕ: 11/06/2025 ರಿಂದ 12/06/2025

1. ಬಾಗಲಕೋಟೆ.
2. ಬೆಳಗಾವಿ.
3. ಧಾರವಾಡ.
4. ಗದಗ.
5. ಉತ್ತರ ಕನ್ನಡ.
6. ವಿಜಯಪುರ.

ಗೆ,

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ಎಲ್ಲಾ ಜಿಲ್ಲೆಗಳು.

K. B. [signature] 4/06

**ಆಯುಕ್ತರು,**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ಆಯುಕ್ತಾಲಯ, ಆರೋಗ್ಯಸೌಧ,
ಬೆಂಗಳೂರು.

**ಪ್ರತಿಯನ್ನು:–**

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಮಾಹಿತಿಗಾಗಿ.
2. ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ–5, ವಿಧಾನಸೌಧ, ಬೆಂಗಳೂರು ರವರ ಮಾಹಿತಿಗಾಗಿ.

3. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯಸೌಧ, ಬೆಂಗಳೂರು.
4. ಎಲ್ಲಾ ವಿಭಾಗಗಳ ವಿಭಾಗೀಯ ಜಂಟಿ ನಿರ್ದೇಶಕರುಗಳು ಸದರಿ ವಿಷಯನ್ನು ಆದ್ಯತೆಯಂತೆ ಪರಿಗಣಿಸಿ ಕ್ರಮವಹಿಸಲು ತಿಳಿಸಿದೆ.
5. ಮುಖ್ಯ ಲೆಕ್ಕ ಪತ್ರಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯಸೌಧ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಜಂಟಿ ನಿರ್ದೇಶಕರು (ಆರೋಗ್ಯ ಮತ್ತು ಯೋಜನೆ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
8. ಉಪ ನಿರ್ದೇಶಕರು (ಆರೋಗ್ಯ ಮತ್ತು ಯೋಜನೆ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
9. ಸಹ ನಿರ್ದೇಶಕರು (ಕುಟುಂಬ ಕಲ್ಯಾಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
10. ಕಛೇರಿ ಪ್ರತಿ.